**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>**

**<u>Spl.C.NDPS.1/2022</u>**

| | | |
|---|---|---|
| ಸಾಕ್ಷಿದಾರರ ಹೆಸರು | : | ಹನುಮಂತಪ್ಪ ಬಿ. ಹೆಚ್. |
| ತಂದೆಯ/ಗಂಡನ ಹೆಸರು | : | ಬಿ. ಹಾಲಪ್ಪ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಹೆಚ್.ಸಿ., ಡಿ.ಎ.ಆರ್., ದಾವಣಗೆರೆ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 3

ಸಿ.ಡಬ್ಲ್ಯೂ 10

ದಿ: 24-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಸತೀಶ್ ಕೆ.ಎಸ್.)</u>**:

1. ಚಾಸಾ-1, 4 ರಿಂದ 9 ರವರು ಗೊತ್ತಿರುತ್ತಾರೆ. ಚಾಸಾ-2 ಮತ್ತು 3 ರವರು ಸಹ ಗೊತ್ತಿರುತ್ತಾರೆ. ದಿಃ 25-06-2020 ರಿಂದ ದಿಃ 29-10-2021 ರವರೆಗೆ ಪೊಲೀಸ್ ಉಪಾಧೀಕ್ಷಕರು ದಾವಣಗೆರೆಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಜೀಪು ಚಾಲಕ ಆಗಿ ಕೆಲಸ ಮಾಡಿದ್ದೇನೆ. ದಿಃ 30-01-2021 ರಂದು ನಾನು ಚಾಸಾ-1 ರವರೊಂದಿಗೆ ಹರಿಹರ ಹರಮಠದಲ್ಲಿ ಬಂದ್ ಬಸ್ತು ಕರ್ತವ್ಯದಲ್ಲಿ ಇದ್ದು ಚಾಸಾ-1 ರವರಿಗೆ ಬಿಳಿಚೋಡು ಸರಹದ್ದಿನಲ್ಲಿ ಗಾಂಜಾದ ಬಗ್ಗೆ ಮಾಹಿತಿ ಬಂದಿದ್ದರಿಂದ ಚಾಸಾ-1 ರವರು ಮತ್ತು ನಾನು ಮಧ್ಯಾಹ್ನ 1.30 ಗಂಟೆಗೆ ಹರಮಠದಿಂದ ಬಿಟ್ಟು ದಾವಣಗೆರೆ ಗ್ರಾಮಾಂತರ ಉಪಾಧೀಕ್ಷಕರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಚಾಸಾ-4 ಮತ್ತು 5 ರವರನ್ನು ಕರೆದುಕೊಂಡು,

ಚಾಸಾ-1 ರವರು ಚಾಸಾ-4 ರವರಿಗೆ ತಮ್ಮ ಸಿಬ್ಬಂದಿಯನ್ನು ಬಿಳಿಚೋಡು ಪೊಲೀಸ್ ಠಾಣೆಗೆ ಕರೆದುಕೊಂಡು ಬನ್ನಿ ಅಂತ ತಿಳಿಸಿ, ನಾವು ಬಿಳಿಚೋಡು ಠಾಣೆಗೆ ಮಧ್ಯಾಹ್ನ 2.45 ಗಂಟೆಗೆ ಹೋದೆವು.

2. ಚಾಸಾ-1 ರವರು ಪಂಚರಾದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ನೋಟಿಸ್ಸನ್ನು ಜಾರಿ ಮಾಡಿ, ಪಂಚರಾಗಿ ಸಹಕರಿಸಲು ಕೇಳಿದರು. ಪಂಚರಿಗೆ ಮಾಹಿತಿಯನ್ನು ನೀಡಿದರು. ಅಷ್ಟರಲ್ಲಿ ಚಾಸಾ-4 ರವರು ತಮ್ಮ ಸಿಬ್ಬಂದಿಗಳಾದ ಚಾಸಾ-5, 7 ರಿಂದ 9 ರವರನ್ನು ಕರೆದುಕೊಂಡು ಬಿಳಿಚೋಡು ಪೊಲೀಸ್ ಠಾಣೆಗೆ ಬಂದರು. ಚಾಸಾ-1 ರವರು ಈ ಪ್ರಕರಣದ ಬಗ್ಗೆ ಪಂಚರಿಗೆ ಹಾಗೂ ಸಿಬ್ಬಂದಿಗಳಿಗೆ ಮಾಹಿತಿ ನೀಡಿದರು. ಮಧ್ಯಾಹ್ನ 3.40 ಗಂಟೆಗೆ ಬಿಳಿಚೋಡು ಪೊಲೀಸ್ ಠಾಣೆಯಿಂದ ನಾವೆಲ್ಲರೂ ಮೆದಿಕೆರೆನಹಳ್ಳಿಗೆ ಹೋಗುವ ರಸ್ತೆಗೆ ಹೋಗಿ ಹೊಲದಲ್ಲಿ ಇರತಕ್ಕಂತಹ ಒಂದು ದನದ ಮನೆಯ ಬಳಿ ಹೋದೆವು. ಆ ಮನೆಯ ಹತ್ತಿರ ಹೋದಾಗ ಒಬ್ಬ ವಯಸ್ಸಾದ ವ್ಯಕ್ತಿ ಇದ್ದು, ಅವರ ಹೆಸರು ಮತ್ತು ವಿಳಾಸ ಕೇಳಲಾಗಿ, ಅವರು ತಮ್ಮ ಹೆಸರು ದಂಡ್ಯಪ್ಪ ತಂದೆ ಪಕೀರಪ್ಪ ಅಂತ ತಿಳಿಸಿದರು. ಆ ದಿನ ಆ ಸ್ಥಳದಲ್ಲಿ ಇದ್ದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ಇರುತ್ತಾನೆ. ಸಾಕ್ಷಿದಾರರು ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ನಂತರ ಆರೋಪಿತನಿಗೆ ಚಾಸಾ-1 ರವರು ನಿಮ್ಮ ಮನೆಯಲ್ಲಿ ಗಾಂಜಾ ಇದೆ ಅಂತ ಮಾಹಿತಿ ಬಂದಿದೆ, ಆದ್ದರಿಂದ ನಿಮ್ಮ ಮನೆಯನ್ನು ಶೋಧನೆ ಮಾಡಬೇಕು ಅದಕ್ಕೆ ಸಹಕರಿಸಲು ಕೋರಿದರು. ಅದಕ್ಕೆ ಆರೋಪಿಯು ಒಪ್ಪಿದ್ದರಿಂದ ಚಾಸಾ-1 ರವರು ಹಾಗೂ ಸಿಬ್ಬಂದಿಯಾದ ನಾವೆಲ್ಲರೂ ಆರೋಪಿಯ ಮನೆಯ ಒಳಗಡೆ ಹೋಗುವ ಪೂರ್ವದಲ್ಲಿ ನಮ್ಮ ಅಂಗ ಶೋಧನೆಯನ್ನು ಪರಸ್ಪರ ಮಾಡಿಕೊಂಡೆವು. ನಮ್ಮ ಬಳಿ ಯಾವುದೇ ಗಾಂಜಾಗೆ ಸಂಬಂಧಪಟ್ಟ ವಸ್ತುಗಳು ಕಂಡು ಬಂದಿರುವುದಿಲ್ಲ. ನಂತರ ಆರೋಪಿಯು ಶೆಲ್ಫ್ ಮೇಲೆ ಇದ್ದಂತಹ ರಟ್ಟಿನ ಬಾಕ್ಸ್ ನ್ನು ಹಾಜರುಪಡಿಸಿದ್ದು, ಅದನ್ನು ಪರಶೀಲನೆ ಮಾಡಿ ನೋಡಲಾಗಿ ಅದರಲ್ಲಿ ಪ್ಲಾಸ್ಟಿಕ್ ಕವರ್ ನಲ್ಲಿ ಗಾಂಜಾ

ಇದ್ದ ಸೊಪ್ಪು ಕಂಡು ಬಂತು. ವಾಸನೆಯಿಂದ ಅದು ಗಾಂಜಾ ಅಂತ ಖಚಿತಪಡಿಸಿಕೊಂಡೆವು. ಪ್ಲಾಸ್ಟಿಕ್ ಕವರ್ ನಲ್ಲಿ ಇದ್ದಂತಹ ಗಾಂಜಾವನ್ನು ತೂಕದ ಯಂತ್ರದ ಸಹಾಯದಿಂದ ತೂಕವನ್ನು ಮಾಡಿದಾಗ, ಅದು 380 ಗ್ರಾಂ. ಗಾಂಜಾ ತೂಕ ಇತ್ತು. ಅದರಲ್ಲಿ 100 ಗ್ರಾಂ. ಗಾಂಜಾವನ್ನು ಮಾದರಿಗಾಗಿ ತಜ್ಞರ ಪರೀಕ್ಷೆಗಾಗಿ ಪ್ರತ್ಯೇಕ ಮಾಡಿ ಬಿಳಿ ಚೀಲದಲ್ಲಿ ಹಾಕಿ ಅದನ್ನು ಹೊಲಿದು ಮುದ್ದೆ ಹಾಕಿ, ಅದಕ್ಕೆ ಪಂಚರು ಮತ್ತು ಚಾಸಾ-1 ರವರು ಸಹಿ ಮಾಡಿದ ಚೀಟಿಯನ್ನು ಅಂಟಿಸಲಾಯಿತು. ಇನ್ನೂ ಉಳಿದ 280 ಗ್ರಾಂ. ಗಾಂಜಾ ಸೊಪ್ಪನ್ನು ಪ್ಲಾಸ್ಟಿಕ್ ಕವರ್ ನ್ನು ಅದೇ ಬಾಕ್ಸ ನಲ್ಲಿ ಹಾಕಿ ವಶಪಡಿಕೊಳ್ಳಲಾಯಿತು. ಚಾಸಾ-1 ರವರು ಇದನ್ನು ಎಲ್ಲಿಂದ ತಂದಿ ಅಂತ ಆರೋಪಿಗೆ ಕೇಳಿದಾಗ, ಆರೋಪಿಯು ತನ್ನ ಹೊಲದಲ್ಲಿ ಬೆಳೆದಿರುವುದಾಗಿ ಮತ್ತು ಅದನ್ನು ತೋರಿಸುತ್ತೇನೆ ಅಂತ ತಿಳಿಸಿದರು. ನಂತರ ಅವರ ಮನೆಯ ಹಿಂಭಾಗದಲ್ಲಿರುವ ಬದನೆಕಾಯಿ ಬೆಳೆದಿರುವ ಹೊಲದಲ್ಲಿ ಗಾಂಜಾ ಗಿಡಗಳನ್ನು ತೋರಿಸಿದರು. ಆಗ ಚಾಸಾ-1 ರವರು ಅಲ್ಲೇ ಪಕ್ಕದ ಹೊಲದಲ್ಲಿ ಬೇಸಾಯ ಮಾಡುತ್ತಿದ್ದ ಟ್ರ್ಯಾಕ್ಟರ್ ಚಾಲಕರಾದ ಬಸವರಾಜರವರನ್ನು ಕರೆಸಿ, ಅವರಿಗೆ ಇದರ ಬಗ್ಗೆ ಮಾಹಿತಿ ತಿಳಿಸಿದರು. ನಂತರ ಸದರಿ ಗಾಂಜಾ ಗಿಡಗಳನ್ನು ಕಿತ್ತು ಕೊಡಲು ಬಸವರಾಜರವರಿಗೆ ತಿಳಿಸಿದರು. ಆಗ ಅವರು ಒಪ್ಪಿಕೊಂಡು ಆರೋಪಿಯು ತೋರಿಸಿದಂತಹ 45 ಇಂಚಿನ 08 ಗಾಂಜಾ ಗಿಡಗಳನ್ನು ಹಾಗೂ 30 ಇಂಚಿನ 24 ಗಾಂಜಾ ಗಿಡಗಳನ್ನು ಕಿತ್ತಿದರು. ನಂತರ ಅವುಗಳನ್ನು ತೂಕ ಮಾಡಿ ನೋಡಲಾಗಿ 650 ಗ್ರಾಂ. ತೂಕ ಇತ್ತು ಮತ್ತು ಅದರ ಬೆಲೆ ಅಂದಾಜು 2000 ರೂಪಾಯಿ ಇರುತ್ತದೆ.

3. ಅದರಲ್ಲಿ 125 ಗ್ರಾಂ. ತೂಕ ದ 03 ಗಿಡಗಳನ್ನು ತಜ್ಞರ ಪರೀಕ್ಷೆಗಾಗಿ ಬಿಳಿ ಚೀಲದಲ್ಲಿ ಹಾಕಿ ಸೀಲ್ ಮಾಡಲಾಯಿತು. ಇನ್ನೂ ಉಳಿದ ಗಿಡಗಳನ್ನು ಪ್ರತ್ಯೇಕವಾಗಿ ಸೀಲ್ ಮಾಡಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಲಾಯಿತು. ಈ ಬಗ್ಗೆ ಪಂಚನಾಮೆಯನ್ನು ಸಂಜೆ 4.00 ರಿಂದ 5.45 ಗಂಟೆಯವರೆಗೆ ಜರುಗಿಸಿ, ಮೇಲ್ಕಂಡ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡು ಆರೋಪಿಯನ್ನು ವಶಕ್ಕೆ

ತೆಗೆದುಕೊಳ್ಳಲಾಯಿತು. ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-2 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಅಂತ ಗುರುತಿಸಲಾಯಿತು. ಸ್ಥಳದಲ್ಲಿ ತಯಾರಿಸಿದ ಕಚ್ಚಾ ನಕಾಶೆಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-3 ಅಂತ ಗುರುತಿಸಲಾಗಿದೆ. ಸ್ಥಳದಲ್ಲಿ ಪೋಟೋಗಳನ್ನು ತೆಗೆದಿರುತ್ತಾರೆ. ಈ ಪೋಟೋಗಳನ್ನು ಈಗಾಗಲೇ ನಿಪಿ-4 ರಿಂದ 21 ಅಂತ ಗುರುತಿಸಲಾಗಿದೆ. ನ್ಯಾಯಾಲಯದ ಮುಂದೆ ಇರುವ ಮು.ಮಾ.1 ಮತ್ತು 2 ನ್ನು ನೋಡಿ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಎನ್.ಬಿ.ಪಿ., ವಕೀಲರಿಂದ ಆರೋಪಿತರ ಪರವಾಗಿ**:

4. ನಾನು ಬಿಳಿಚೋಡು ಪೊಲೀಸ್ ಠಾಣೆಗೆ ಹೋದಾಗ ಸಮಯ 2.45 ಗಂಟೆ ಆಗಿತ್ತು. ಪಂಚರು 3.30 ಗಂಟೆಗೆ ಬಂದರು. ಆ ಪಂಚರಿಗೆ ನಮ್ಮ ಮೇಲಾಧಿಕಾರಿಗಳು ನೋಟಿಸ್ಸನ್ನು ನೀಡಿರುತ್ತಾರೆ. ಪಂಚರು ನೋಟಿಸ್ಸಿಗೆ ಸಹಿ ಮಾಡಿದರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಆ ನೋಟಿಸ್ಸಿಗೆ ಸಹಿ ಮಾಡಿಲ್ಲ. ಸ್ಥಳಕ್ಕೆ ನಾನು ಹೋದಾಗ 4.00 ಗಂಟೆ ಆಗಿತ್ತು. ಆರೋಪಿಯ ಜಮೀನು ನೀರಾವರಿ ಜಮೀನು ಅಂದರೆ ನಿಜ. ಆರೋಪಿಯ ಜಮೀನಿನ ಸುತ್ತಮುತ್ತ ಇರುವ ಜಮೀನುಗಳು ನೀರಾವರಿ ಜಮೀನು ಅಂದರೆ ನನಗೆ ಗೊತ್ತಿಲ್ಲ. ಆರೋಪಿಯ ಜಮೀನಿನ ಎಲ್ಲಾ ದಿಕ್ಕಿನ ಬದುವಿನ ಮೇಲೆ ಗಿಡಗಳು ಬೆಳೆದಿವೆ ಅಂದರೆ ಎಲ್ಲಾ ದಿಕ್ಕಿನಲ್ಲಿ ಬೆಳೆದಿಲ್ಲ.

5. ಆರೋಪಿಯ ಮನೆಯಲ್ಲಿರುವ ಗಾಂಜಾದ ಹೂವು ಮತ್ತು ಕಾಯಿಯನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡಿಲ್ಲ, ಸೊಪ್ಪಿನ ಸಮೇತ ಹೂವು ಮತ್ತು ಕಾಯಿ ಇರುವ ಗಾಂಜಾವನ್ನು ವಶಪಡಿಸಿಕೊಳ್ಳಲಾಯಿತು. ಆರೋಪಿಯ ಜಮೀನಿನಲ್ಲಿ ಯಾವ ಯಾವ ಸಾಲಿನಲ್ಲಿ ಎಷ್ಟೆಷ್ಟು ಗಾಂಜಾ ಗಿಡಗಳು ಇದ್ದವು ಅಂತ ಹೇಳಲು ಆಗುವುದಿಲ್ಲ. ಆ ಗಿಡಗಳಲ್ಲಿ ಹೂವು ಮತ್ತು ಕಾಯಿಯನ್ನು ಪ್ರತ್ಯೇಕ

ಮಾಡಿಲ್ಲ. ಆರೋಪಿಯ ಜಮೀನಿನಲ್ಲಿ ಗಾಂಜಾ ಗಿಡಗಳನ್ನು ಬೆಳೆದಿದ್ದು ಸುಳ್ಳು ಅಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.